


ಗೋಚರಿಸಿದವು. ಸುಖದ ಕ್ಷಣಕ್ಕೆ ಕಲ್ಲುಹಾಕಿದ ನೀಲಾಂಜನನನ್ನು ತಮ್ಮ ಚೇಂಬರಿನಲ್ಲಿ ನೋಡಿದ ಸಾಹೇಬರಿಗೆ ಸಲೀಂ ಮತ್ತು ಅನಾರ್ಕಲಿ ನಡುವೆ ಅಕ್ಬರ್ ನಿಂತಂತೆ ಭಾಸವಾಗಿ ಅವರ ಇಡೀ ಶರೀರ ನಖಶಿಖಾಂತ ಉರಿಯತೊಡಗಿತು.

‘ರಂಗಪ್ಪ ವೇರ್ ಆರ್ ಯೂ ಗೋಯಿಂಗ್ ಹೆಲ್’ – ಚಿದ್ರಿ ಸಾಹೇಬರ ಕೂಗಿಗೆ ಇಡೀ ಆಫೀಸಿನ ಸಿಬ್ಬಂದಿ ಜನರಲ್ ಮ್ಯಾನೇಜರರ ಚೇಂಬರಿಗೆ ದೌಡಾಯಿಸಿತು. ಸೇದುತ್ತಿದ್ದ ಬೀಡಿಯನ್ನು ಅರ್ಧಕ್ಕೆ ಎಸೆದು ಏದುಸಿರು ಬಿಡುತ್ತ ಓಡೋಡಿ ಬಂದ ರಂಗಪ್ಪ ಮೊದಲೇ ಬಡವಾಗಿದ್ದ ತನ್ನ ದೇಹವನ್ನು ಮತ್ತಷ್ಟು ಹಿಡಿಯಾಗಿಸಿಕೊಂಡು ಸಾಹೇಬರ ಎದುರು ನಡುಬಗ್ಗಿಸಿ ನಿಂತ. ಟೇಬಲ್ ಮೇಲಿದ್ದ ಫೈಲನ್ನು ರೊಂಯ್ಯನೆ ರಂಗಪ್ಪನ ಮುಖದ ಮೇಲೆ ಎಸೆದು, ‘ಯಾರನ್ನಾದರೂ ಚೇಂಬರ್ ಒಳಗೆ ಬಿಡೋ ಮೊದಲು ನನ್ನ ಪರ್ಮಿಶನ್ ತೆಗೆದುಕೊಳ್ಳಬೇಕು ಅಂತ ಗೊತ್ತಿಲ್ಲ ನಿನಗೆ. ರ‍್ರೀ ನೀಲಾಂಜನ ನಿಮಗೂ ಬುದ್ಧಿ ಇಲ್ವೇನ್ರೀ. ಯೂ ಎಜುಕೇಟೆಡ್ ಫೂಲ್’ ಎಂದು ಏಕಕಾಲಕ್ಕೆ ಇಬ್ಬರನ್ನೂ ಬೈಯ್ದು ಅವರಿಬ್ಬರಿಗಿಂತ ಮೊದಲು ತಾವೇ ಚೇಂಬರಿನಿಂದ ಹೊರಬಂದು ಕಾರ್ ಪಾರ್ಕಿಂಗ್ ಕಡೆ ಹೆಜ್ಜೆ ಹಾಕತೊಡಗಿದರು. ರಂಗಪ್ಪ ತನ್ನ ನೌಕರಿಗೆಲ್ಲಿ ಸಂಚಕಾರ ಬಂದಿತೋ ಎಂದು ಹೆದರಿದವನು ತನ್ನೆದುರು ಹಲ್ಲು ಕಿರಿಯುತ್ತ ನಿಂತಿದ್ದ ನೀಲಾಂಜನನನ್ನು ಹೆಚ್ಚು ಕಡಿಮೆ ತಳ್ಳಿಕೊಂಡೇ ಚೇಂಬರಿನಿಂದ ಹೊರಗೆ ಕರೆತಂದು ತಾನು ಪ್ರತಿನಿತ್ಯ ಕೂಡುತ್ತಿದ್ದ ಸ್ಟೂಲ್ ಮೇಲೆ ಅವನನ್ನು ಕೂಡಿಸಿ ತನ್ನ ಶಬ್ದಕೋಶದಲ್ಲಿದ್ದ ಎಲ್ಲ ಸುಸಂಸ್ಕೃತ ಶಬ್ದಗಳನ್ನು ಬಳಸಿ ಬೈಯತೊಡಗಿದ.

ರಂಗಪ್ಪನಿಗೆ ತನ್ನ ಮೇಲೆ ಸಾಹೇಬರು ಸಿಟ್ಟಾದದ್ದಕ್ಕೆ ಕಾರಣವಾಗಲಿ, ಚೇಂಬರಿನಲ್ಲಿ ಒಳಗೆ ಏನು ನಡೆಯಿತೆನ್ನುವುದಾಗಲಿ, ಈ ವೇಳೆಯಲ್ಲಿ ಆ ಹ್ಯಾಪ್ ಮುಖದ ನೀಲಾಂಜನ ಇಲ್ಲೇನು ಮಾಡುತ್ತಿದ್ದನೆಂದಾಗಲಿ ಒಂದೂ ಗೊತ್ತಿಲ್ಲದೆ ಅವನು ನೀಲಾಂಜನನ ಮೇಲೆ ಹರಿಹಾಯಲು ತೊಡಗಿದ್ದೇ ದೊಡ್ಡ ಎಡವಟ್ಟಾಯಿತು. ಒಂದೆಡೆ ರುದ್ರನೇತ್ರನನ್ನೆ ಮೈಮೇಲೆ ಆವಾಹಿಸಿಕೊಂಡಂತೆ ಭಯಂಕರ ಕೋಪದಿಂದ ಕುದಿಯುತ್ತಿದ್ದ ರಂಗಪ್ಪ ಇನ್ನೊಂದೆಡೆ ಚೇಂಬರ್ ಒಳಗೆ ನೋಡಿದ ದೃಶ್ಯವನ್ನು ಮತ್ತೆ ಮತ್ತೆ ರಿವೈಂಡ್ ಮಾಡಿಕೊಂಡು ತನ್ನಷ್ಟಕ್ಕೆ ತಾನು ಪೆಕರುಪೆಕರಾಗಿ ನಗುತ್ತಿದ್ದ ನೀಲಾಂಜನ, ಆ ಕ್ಷಣಕ್ಕೆ ಅವರಿಬ್ಬರೂ ಅಲ್ಲಿ ನೆರೆದಿದ್ದ ಆಫೀಸಿನ ಸಿಬ್ಬಂದಿಗೆ ಪುಕ್ಕಟ್ಟೆ ಮನರಂಜನೆ ಒದಗಿಸುತ್ತಿದ್ದರು. ಕೋಪದ ಭರದಲ್ಲಿ, ‘ನಾನಿಲ್ಲದಿದ್ದಾಗ ಸಾಹೇಬರ ಚೇಂಬರ್ ಒಳಗೆ ಪರ್ಮಿಶನ್ ಇಲ್ಲದೆ ಹೋಗೋದಕ್ಕೆ ನಿನ್ನ ಬುದ್ಧಿಯೇನು ಲದ್ದಿ ತಿನ್ನೋದಕ್ಕೆ ಹೋಗಿತ್ತಾ’ ಎಂದು ರಂಗಪ್ಪ ಕೇಳುವುದಕ್ಕೂ, ‘ಅಷ್ಟು ಬುದ್ಧಿ ಇರೋನು ಇಲ್ಲೆ ಕೂತ್ಕೊಂಡು ಒಳಗಡೆ ಸಾಹೇಬರು ಪದ್ಮಿನಿ ಜೊತೆ ಚಕ್ಕಂದ ಆಡ್ತಿದ್ದಾರೆ ಅಂತ ಹೇಳಬೇಕಿತ್ತು’ ಎಂದು ನೀಲಾಂಜನ ಪ್ರತಿ ನುಡಿಯುವುದಕ್ಕೂ ಸರಿಹೋಯಿತು. ಕ್ಷಣಮಾತ್ರದಲ್ಲಿ ಸುದ್ದಿ ಕಾಳ್ಗಿಚ್ಚಿನಂತೆ ಇಡೀ ಆಫೀಸಿನ ತುಂಬ ಹರಿದಾಡಿ ಕಳೆದೊಂದು ತಿಂಗಳಿನಿಂದ ಲೀವ್ ಸ್ಯಾಂಕ್ಷನ್ ಆಗದೆ ಪರದಾಡುತ್ತಿದ್ದ ಪದ್ಮಿನಿಗೆ ಇವತ್ತು ಇದ್ದಕ್ಕಿದ್ದಂತೆ ಹದಿನೈದು ದಿನಗಳ ಲೀವ್ ಸ್ಯಾಂಕ್ಷನ್ ಆಗಿರುವುದು ನಡೆದ ಘಟನೆಗೆ ಬಲವಾದ ಪುರಾವೆ ಒದಗಿಸಿತ್ತು.